OS 299/2021
PW-1

ದಿನಾಂಕಃ 26-07-2023 ರಂದು ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಹೆಚ್ ಎನ್ ಜಿ ವಕೀಲರಿಂದಃ**

ಚನ್ನಗಿರಿ ತಾಲ್ಲೂಕಿನ ಸರ್ವೆ ನಂ 11/1 ಪಿ2 ವಿಸ್ತೀರ್ಣ 2 ಎಕರೆ 20 ಗುಂಟೆ ಜಮೀನು ರಾಮನಾಯ್ಕ ಬಿನ್ ದ್ಯಾವ್ಲಾನಾಯ್ಕರವರ ಹೆಸರಿಗೆ ಸರ್ಕಾರದಿಂದ ಮಂಜೂರಾಗಿದ್ದು ಸದರಿಯವರ ಹೆಸರಿಗೆ ಸಾಗುವಳಿ ಚೀಟಿ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ತಂದೆ ಲಕ್ಷ್ಮನಾಯ್ಕ ಮತ್ತು ದ್ಯಾವ್ಲನಾಯ್ಕ ಇಬ್ಬರು ಅಣ್ಣ ತಮ್ಮಂದಿರು ಎಂದು ನುಡಿಯುತ್ತಾರೆ, ಸದರಿ ರಾಮನಾಯ್ಕರವರಿಗೆ 3 ಜನ ಮಕ್ಕಳು ಅವರು ಉಮಾಪತಿ, ಕೃಷ್ಣನಾಯ್ಕ, ಶಿವನಾಯ್ಕ. ರಾಮನಾಯ್ಕರವರಿಗೆ ನಮ್ಮ ತಂದೆ ಅಣ್ಣನಾಗಬೇಕು. ಈ ದಾವೆಯ 1 ನೇ ಪ್ರತಿವಾದಿ ಯಾರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ಈಗ ಒಂದು ವಂಶವೃಕ್ಷವನ್ನು ತೋರಿಸಲಾಗಿ ಸದರಿ ವಂಶವೃಕ್ಷ ನಮ್ಮ ಕುಟುಂಬಕ್ಕೆ ಸೇರಿದ್ದಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ನಿಪಿ-15 ರಂತೆ ನಮ್ಮ ವಂಶವೃಕ್ಷವಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ವಂಶವೃಕ್ಷದಲ್ಲಿರುವ ಸೋಮ್ಲಾನಾಯ್ಕ ಎನ್ನುವವರನ್ನು ದತ್ತುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸೋಮ್ಲಾನಾಯ್ಕರವರು ದ್ಯಾವ್ಲನಾಯ್ಕರವರ ಮಗ ಎಂದರೆ ಸರಿ. ಸದರಿ ಸೋಮ್ಲಾನಾಯ್ಕರವರಿಗೆ ಕಬ್ಬಳ ಗ್ರಾಮದ ಸರ್ವೆ ನಂ 40 ರಲ್ಲಿ 1 ಎಕರೆ 10 ಗುಂಟೆ ಜಮೀನು ಇದೆ ಎಂದರೆ ಸರಿ. ಸದರಿ ಸೋಮ್ಲಾನಾಯ್ಕರವರು ನಮ್ಮ ವಂಶದ ವಾರಸುದಾರರು ಎಂದರೆ ಸರಿ. ಸಾಕ್ಷಿಗೆ ಈಗ ಒಂದು ಪಹಣಿಯನ್ನು ತೋರಿಸಲಾಗಿ ಸದರಿ ದಾಖಲೆ 1995-96 ರಿಂದ 2000-2001 ನೇ ಸಾಲಿನ ಕಬ್ಬಳ ಗ್ರಾಮದ ಸರ್ವೆ.ನಂ.40/ಎಫ್ ಪಹಣಿಯ ಪ್ರಮಾಣಿತ ಪ್ರತಿಯಾಗಿದ್ದು ಸದರಿ ದಾಖಲೆಯಲ್ಲಿ ಸೋಮ್ಲಾನಾಯ್ಕ ಬಿನ್ ಸಕ್ರ್ಯಾನಾಯ್ಕ ಎಂದು ನಮೂದು ಇದೆ ಎಂದರೆ ಸಾಕ್ಷಿ ಸೋಮ್ಲಾನಾಯ್ಕನನ್ನು ದತ್ತಕ ತಂದೆ ಸಕ್ರ್ಯಾನಾಯ್ಕ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ನಾನು ಹೇಳಿದಂತೆ ನಿಪಿ-15 ರಲ್ಲಿ ಸೋಮ್ಲಾನಾಯ್ಕನ ತಂದೆ ದ್ಯಾವ್ಲನಾಯ್ಕ ಎಂದು ಇದ್ದು ಆದರೆ ನಿಡಿ-1 ರ ಪ್ರಕಾರ ಸದರಿ ಸೋಮ್ಲಾನಾಯ್ಕನ ತಂದೆ ಸಕ್ರ್ಯಾನಾಯ್ಕ ಎಂದು ಉಲ್ಲೇಖವಿರುವುದರಿಂದ ನಾನು ಹಾಜರುಪಡಿಸಿರುವ ನಿಪಿ-15 ಸುಳ್ಳು ಸೃಷ್ಟಿ ಎಂದರೆ ಸರಿಯಲ್ಲ.

(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.

ದಿನಾಂಕಃ 10-08-2023 ರಂದು ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರಿದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಹೆಚ್ ಎನ್ ಜಿ ವಕೀಲರಿಂದಃ</u>**

ದ್ಯಾವ್ಲನಾಯ್ಕರವರಿಗೆ ನನ್ನ ತಂದೆಯಾದ ಲಕ್ಷ್ಮನಾಯ್ಕ ಹಿರಿಯ ಮಗ ಎಂದರೆ ಸರಿ. ದ್ಯಾವ್ಲನಾಯ್ಕರವರಿಗೆ ರಾಮನಾಯ್ಕ ಎನ್ನುವವರು 3 ನೇ ಮಗ ಎಂದರೆ ಸರಿ. ದ್ಯಾವ್ಲನಾಯ್ಕರವರ 2 ನೇ ಮಗ ಸೋಮ್ಮನಾಯ್ಕರವರನ್ನು ಸಕ್ರ್ಯನಾಯ್ಕರವರಿಗೆ ದತ್ತು ಕೊಟ್ಟ ಬಗ್ಗೆ ಯಾವುದಾದರೂ ನೊಂದಾಯಿತ ದಾಖಲೆಗಳು ಇದೆಯೇ ಎಂದರೆ ಸಾಕ್ಷಿ ಸದರಿ ಕಾಲಕ್ಕೆ ಯಾವುದೇ ದಾಖಲೆಗಳು ಇರಲಿಲ್ಲ ಎಂದು ನುಡಿಯುತ್ತಾರೆ. ಸಿದ್ದಾಪುರ ಗ್ರಾಮದ ಸರ್ವೆ ನಂ 11/1 ಪಿ2 ರಲ್ಲಿರುವ 2 ಎಕರೆ 20 ಗುಂಟೆ ಜಮೀನು ದ್ಯಾವ್ಲನಾಯ್ಕರ 3 ನೇ ಮಗ ರಾಮನಾಯ್ಕರವರಿಗೆ ಮಂಜೂರಾಗಿ ಸಾಗುವಳಿ ಚೀಟಿ ಪಡೆದಿದ್ದಾರೆ ಎಂದರೆ ಸಾಕ್ಷಿ ಸದರಿ 2 ಎಕರೆ 20 ಗುಂಟೆ ಜಮೀನು ಒಟ್ಟು ಕುಟುಂಬದ ಆಸ್ತಿ ಎಂದು ನುಡಿಯುತ್ತಾರೆ. ಸದರಿ ಸಾಗುವಳಿ ಚೀಟಿಯನ್ನು ಪಡೆಯುವ ಸಮಯಕ್ಕೆ ರಾಮನಾಯ್ಕರವರು ಸಲ್ಲಿಸಿದ ಅರ್ಜಿಯಲ್ಲಿ ನನ್ನ ತಂದೆಯ ಹೆಸರಿಗೆ ಸಂಬಂಧಪಟ್ಟ ಯಾವುದಾದರೂ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿ ಸದರಿ ಸಮಯಕ್ಕೆ ಯಾವುದೇ ದಾಖಲೆಗಳು ಇರಲಿಲ್ಲ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ನಿಪಿ-1 ರಿಂದ 4 ಮತ್ತು 7 ರಿಂದ 10 ರ ಪಹಣಿಗಳಲ್ಲಿ ಕಾಲಂ ನಂ 12 ರಲ್ಲಿ ನಮ್ಮ ತಂದೆ ಲಕ್ಷ್ಮನಾಯ್ಕ ಎಂದು ನಮೂದು ಇದ್ದು ಸದರಿ ನಮೂದು ಇರುವ ಕುರಿತು ಯಾವುದಾದರೂ ಮ್ಯೂಟೇಶನ್ ದಾಖಲೆ ಇದೆಯೇ ಎಂದರೆ ಸಾಕ್ಷಿ ನಿಪಿ-5 ರಂತೆ ತಹಶೀಲ್ದಾರ್ ಕಚೇರಿಯವರು ಯಾವುದೇ ದಾಖಲೆ ಇಲ್ಲ ಎಂದು ಹಿಂಬರಹ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-1 ರಿಂದ 4 ಮತ್ತು 7 ರಿಂದ 10 ರ ಪಹಣಿಗಳಾದ ಕಾಲಂ ನಂ 9 ರಲ್ಲಿ ನಮ್ಮ ತಂದೆಯ ಹೆಸರಾಗಲಿ ಅಥವಾ ಅಜ್ಜನ ಹೆಸರಾಗಲಿ ಇಲ್ಲ ಎಂದರೆ ಸರಿ. ನಾನು ಹಾಜರುಪಡಿಸಿದ ದಾಖಲಾತಿ ಪಟ್ಟಿಯಲ್ಲಿ ನಿಪಿ-6 ನ್ನು ನಾನು ಸಲ್ಲಿಸಿರುವುದಿಲ್ಲ. ಎಂ.ಆರ್.ನಂ.2/1976-77 ಕ್ಕೆ ಸಂಬಂಧಪಟ್ಟ ಮ್ಯೂಟೇಶನ್ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಹಾಜರುಪಡಿಸಿರುವ ನಿಪಿ-11 ರಲ್ಲಿ ರಾಮನಾಯ್ಕ ಬಿನ್ ಬಾಬೂರ್ ನಾಯ್ಕ ಎಂದು ಮತ್ತು ಹನುಮನಾಯ್ಕ ಬಿನ್ ರಾಮನಾಯ್ಕ ಎಂದು ನಮೂದು ಇದ್ದು ಸದರಿಯವರು ನನ್ನ ವಾರಸುದಾರರೇ ಎಂದರೆ ಸಾಕ್ಷಿ ಅಲ್ಲ ಎಂದು ನುಡಿಯುತ್ತಾರೆ. ಸದರಿಯವರು ಬೇರೆ ಮನೆತನಕ್ಕೆ ಸೇರಿದವರು ಎಂದು ನುಡಿಯುತ್ತಾರೆ.

ನಾನು ದಾವಣಗೆರೆಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಈ ದಾವಾಸ್ತಿಗೆ ಸಂಬಂಧಪಟ್ಟಂತೆ ನಿಪಿ-12 ರಂತೆ ಮೇಲ್ಮನವಿಯನ್ನು ದಾಖಲಿಸಿದ್ದೆ ಎಂದರೆ ಸರಿ. ಸದರಿ ಮೇಲ್ಮನವಿ ವಜಾ ಆಗಿದೆ ಎಂದರೆ ಸರಿ. ನಿಪಿ-14 ಎಂ ಆರ್ ನಂ 5/2011-12 ರಲ್ಲಿ ನಮ್ಮ ಅಜ್ಜನ ಹೆಸರು ಅಥವಾ ನಮ್ಮ ತಂದೆಯ ಹೆಸರಿಗೆ ಇದೆಯೇ ಎಂದರೆ ಸಾಕ್ಷಿ ನೆಕುಂಟೆ ಶೇಷರತ್ನಂ ಎಂಬುವವರ ಹೆಸರಿಗೆ

OS 299/2021
PW-1

1 ಎಕರೆಗೆ ಪಹಣಿ ಇದೆ ಎಂದು ನುಡಿಯುತ್ತಾರೆ. ನಾನು ನಮ್ಮ ಒಟ್ಟು ಕುಟುಂಬದ ಆಸ್ತಿಗಳಿಗೆ ಸಂಬಂಧಪಟ್ಟಂತೆ ಯಾವ ನ್ಯಾಯಾಲಯದಲ್ಲೂ ಸಿವಿಲ್ ದಾವೆಯನ್ನು ಹೂಡಿಲ್ಲ.

ನನ್ನ ಹೆಸರಿಗಾಗಲಿ, ನನ್ನ ತಂದೆಯ ಹೆಸರಿಗಾಗಲಿ ಅಥವಾರ ನನ್ನ ಅಜ್ಜನ ಹೆಸರಿಗಾಗಲಿ ಯಾವುದೇ ದಾಖಲೆಗಳು ಇಲ್ಲದ ಕಾರಣ ಸದರಿ ದಾವಾಸ್ತಿಯಲ್ಲಿ ನನಗೆ ಯಾವುದೇ ರೀತಿಯ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.
**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.